Sanction of Loan to Primary Land Development Banks

378. Sri P. VENKATAGIRIYAPPA (Kolar).—

Will the Minister for Development be pleased to state :—

(*a*) whether it has come to the notice of the Government that the State Land Development Bank is not extending the loan facility to the Primary Land Development Banks who have not collected 90 per cent of their dues from their members ;

(*b*) the number of Primary Banks affected by the decision of the State Land Development Bank in the State ;

(*c*) whether they are aware that the condition stipulated by the State Land Development Banks cannot be fulfilled by the Primary Land Development Bank due to successive famine conditions prevailing in their Taluks ?

Sri B. L. GOWDA (Deputy Minister for Co-operation).—

(*a*) Yes.

(*b*) 110.

(*c*) Yes.

ಶ್ರೀ ಪಿ. ವೆಂಕಟಗಿರಿಯಪ್ಪ.—ಬಾವಿಗಳಿಗೆ ಕೊಟ್ಟು ಸಾಲವನ್ನು ಸರಿಯಾಗಿ ವಸೂಲ ಮಾಡಲು ಅವಕಾಶವಿಲ್ಲದುದರಿಂದ ಕನಿಷ್ಟ ಪಕ್ಷ ಶೇಕಡಾ ಐವತ್ತರಷ್ಟು ವಸೂಲಿಯಾಗಿರುವವರಿಗೆ ಸಾಲ ಕೊಡಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಇವಾಗುವುದಿಲ್ಲ. ಇದಕ್ಕೆ ರಿಸರ್ವ್ ಬ್ಯಾಂಕಿನವರು ಒಪ್ಪುವುದೂ ಇಲ್ಲ. ಅವರೇ ಹೇಳಿರುವಂತೆ ಸುಸ್ತಿ ಇರುವ ಬ್ಯಾಂಕುಗಳಿಗೆ ಪುನಃ ಸಾಲ ಕೊಡಕೂಡದು ಎಂದು ಹೇಳಿದ್ದಾರೆ. ಆದುದರಿಂದ ಶೇಕಡಾ 90 ರಷ್ಟು ಬಾಕಿ ಇರಕೂಡದು ಎನ್ನುವುದನ್ನು ನಾವು ಸ್ಪೆಷಲ್ ಆಗಿ ಶೇಕಡಾ 80 ರಷ್ಟು ಇಳಿಸರಾಗಿದೆ ಇನ್ನು ಇಳಿಸುವುದಕ್ಕಾಗುವುದಿಲ್ಲ.

ಶ್ರೀ ಎಂ. ಎನ್. ರಾಮಣ್ಣ.—ಕೆಲವು ಕಡೆ ಬಾವಿಗಳಿಗೆ ಸಾಲ ಕೊಟ್ಟು ಬಾವಿ ಕೆಲಸ ಅರ್ಧದಷ್ಟು ಮುಕ್ಕಾಲು ಭಾಗದಷ್ಟು ಕೆಲಸವಾಗಿ ಇನ್ನೂ ಕಾಲು ಭಾಗ ಮಾತ್ರ ಉಳಿದಿದೆ. ಇಂತಹ ಕಡೆಗಳಲ್ಲಿ ಸಾಲ ಕೊಡುತ್ತೀರಾ ಹೇಗೆ ?

ಶ್ರೀ ಬಿ. ಎಲ್. ಗೌಡ.—ಎಲ್ಲೆಲ್ಲಿ ಸಾಲ ಮಾಂಜೂರಾಗಿ ಅದರಲ್ಲಿ ಒಂದೆರಡು ಕಂತುಗಳು ಬಾಕಿ ಇದ್ದರೆ ಅಂತಹ ಕಡೆಗಳಲ್ಲೂ ಸಾಲ ಕೊಡುತ್ತಾರೆ.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್.—ಹೊಸದಾಗಿ ಬಾವಿಗಳಿಗೆ ಸಾಲ ತೆಗೆದು ಕೊಳ್ಳುವ ಬ್ಯಾಂಕುಗಳಿಗೆ ಈಗ ಇರುವ ಪದ್ಧತಿಯಿಂದ ತೊಂದರೆಯಾಗುತ್ತದೆ ಇದರ ಬಗ್ಗೆ ಹೇಗೆ ಮಾಡುತ್ತೀರಿ ?

ಶ್ರೀ ಬಿ. ಎಲ್. ಗೌಡ.—ಇದು ಕೋಆಪರೇಟೀವ್ ಎಫರ್ಟ್ ಮೇಲೆ ಇದೆ. ಸಂಸ್ಥೆಯಲ್ಲಿರುವವರು ಚೆನ್ನಾಗಿ ಕೆಲಸ ಮಾಡಿದರೆ ಇಲ್ಲಿನ ಕೆಲಸಗಳು ಚೆನ್ನಾಗಿರುತ್ತವೆ. ಆದರೆ ಇದರಲ್ಲಿರುವ ವ್ಯಕ್ತಿಗಳು ಸರಿಯಾಗಿ ಕೆಲಸ ಮಾಡದೇ ಇದ್ದರೆ ನಾವೇನೂ ಮಾಡುವುದಕ್ಕಾಗುವುದಿಲ್ಲ. ನಾವು ಸಂಸ್ಥೆಗೆ ಸಹಾಯ ಮಾಡುತ್ತೇವೆ. ವ್ಯಕ್ತಿಗಳಿಗಲ್ಲ.

ಶ್ರೀ ಎಸ್. ಎಂ. ಗುರ್ರೆಡ್ಡಿ.—ರ್ಯಾಂಡು ಮಾರ್ಟ್‌ಗೇಜು ಬ್ಯಾಂಕುಗಳ ಮೂಲಕ ಕೊಡುವಾಗ ಸುಮಾರು 110 ಬ್ಯಾಂಕುಗಳಲ್ಲಿ ತೊಂದರೆಗಳಾಗಿವೆ. ಆದುದರಿಂದ ಪುನಃ ರಿವೆನ್ಯೂ ಖಾತೆಯಲ್ಲಿ ಹಿಂದೆ ಯಾವ ರೀತಿ ಪದ್ಧತಿ ಇತ್ತೋ ಅದರಂತೆ ಮಾಡಲು ಆಗುವುದಿಲ್ಲವೇ ?

ಶ್ರೀ ಬಿ. ಎಲ್. ಗೌಡ.—ಈಗ ಆ ಪ್ರಕಾರ ಮಾಡರಾಗುವುದಿಲ್ಲ. ಸುಮಾರು 30 ಸಾವಿರ ಬಾವಿಗಳನ್ನು ಈಗ ಹಂಚಲು ಅನುಕೂಲವಾಗಿದೆ. ಹಿಂದೆ ರೆವೆನ್ಯೂ ಖಾತೆಯಲ್ಲಿದ್ದಾಗ ಒಂದು ಸಾವಿರ ಅಥವಾ ಎರಡು ಸಾವಿರಕ್ಕೆ ಮೇಲೆ ಬಾವಿಗಳಿಗೆ ಹಣ ಕೊಡರಾಗುತ್ತಿರಲಿಲ್ಲ. ಈಗಿರುವ ಬ್ಯಾಂಕುಗಳಿಂದ ಜನಕ್ಕೆ ಹೆಚ್ಚು ಅನುಕೂಲವಾಗಿದೆ.

ಶ್ರೀ ಇ. ನಾರಾಯಣಗೌಡ.—ಸ್ವಾಮಿ, ಬ್ಯಾಂಕ್‌ನವರು ತಮ್ಮ ಸದಸ್ಯರುಗಳಿಂದ ಶೇಕಡ 90 ರಷ್ಟು ವಸೂಲ್ಮಾಡದಿದ್ದರೆ ಸಾಲದ ಸೌಲಭ್ಯವನ್ನು ಮುಂಜೂರು ಮಾಡುವುದಿಲ್ಲ. ಇದರಿಂದ ಹೊಸದಾಗಿ ಅನುಕೂಲ ಪಡೆಯುತಕ್ಕಂಥ ರೈತರಿಗೆ ತೊಂದರೆಯಾಗುತ್ತದೆ. ಸರ್ಕಾರದವರು ಈ ಧೋರಣೆಯನ್ನು ಬಿಟ್ಟು ಅಭಾವ ಪರಿಸ್ಥಿತಿಯುಲ್ಲಿರುವ ಪ್ರದೇಶಕ್ಕೆ ಅಲ್ಲಿ 50—60 ಪರ್ಸೆಂಟು ವಸೂಲ್ಮಾಡಿದ್ದರೆ ಸಾಲವನ್ನು ಹೊಸದಾಗಿ ಮುಂಜೂರ್ಮಾಡುವುದಕ್ಕೆ ವಿಚಾರ ಮಾಡುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಅಭಾವ ಪರಿಸ್ಥಿತಿ ಎನ್ನುವುದು ಡೆವಲಪ್‌ಮೆಂಟ್ ಲೋನ್‌ಗೆ ಅಪ್ಲೈ ಆಗುವುದಿಲ್ಲ ಅಲ್ಲಿನ ಅಧಿಕಾರಿಗಳು ಮತ್ತು ಅಧಿಕಾರ ವರ್ಗದವರು ವಸೂಲ್ಮಾಡಿದರೆ ಸಾಧ್ಯವಾಗುತ್ತದೆ. ಬಹುಶಃ ಅವರ ತಾಲ್ಲೂಕಿನಲ್ಲಿ ವಸೂಲ್ಮಾಡಿರುವುದು ಅಷ್ಟು ಚೆನ್ನಾಗಿಲ್ಲ. ಮಧುಗಿರಿ ಮತ್ತು ಕೊರಟಗೆರೆ ತಾಲ್ಲೂಕಿನಲ್ಲಿ ತಕ್ಕ ಕಾರ್ಯಕ್ರಮ ತೆಗೆದುಕೊಂಡು ಚೆನ್ನಾಗಿ ವಸೂಲ್ಮಾಡಿದ್ದಾರೆ. ಆದುದರಿಂದ ಚೆನ್ನಾಗಿ ವಸೂಲಾಗದೇ ಇರುವ ಕಡೆ ಸಾಲವನ್ನು ಮುಂಜೂರ್ಮಾಡುವುದಕ್ಕೆ ಸಾಧ್ಯವಿಲ್ಲ.

Mangalore Fertiliser Factory

395. Sri C. K. RAJAIAH SHETTY (Chikkanayakanahally).—

Will the Minister for Industries, Information and Publicity be pleased to state :—

(*a*) the proposed cost of Mangalore Fertiliser Factory ;

(*b*) whether Government has finally concluded agreement with any foreign collaboration for establishing the factory ;

(*c*) whether any advance has been paid to any private firm as Government share or otherwise ;

(*d*) if so, how much ?

Sri M. RAJASEKHARA MURTHY (Minister for Industries, Information and Publicity).—

(*a*) The total investment for the first phase of the Project, namely, 600 tons ammonia and 1,000 tons urea, is about Rs. 40 crores. The capital structure consists of equity of Rs. 11 crores and preference of Rs. 3 crores.

(*b*) No. The foreign collaboration agreement with the foreign collaborators will be entered into by M/s. Malabar Chemicals and Fertilisers Ltd., and not by Government. Sanction of the Government of India to the collaboration agreement is awaited.

(*c*) and (*d*) Mrs. Malabar Chemicals and Fertilizer Ltd., is a public Limited Company and not a private firm. Government have agreed to subscribe Rs. 2 crores to the share capital of the Company.